Office of the Additional Commissioner of Commercial Taxes
13 JUN 2023
295
ADCOM Bengaluru (e-Governance)

**ಕರ್ನಾಟಕ ಸರ್ಕಾರ**
**(ವಾಣಿಜ್ಯ ತೆರಿಗೆಗಳ ಇಲಾಖೆ)**

ಸಂಖ್ಯೆ:ವಾತೆಜಂಅ(ಜಾರಿ)/ಹು/23-24/ಬಿ- 203

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ರವರ ಕಚೇರಿ
2ನೇ ಮಹಡಿ, ವಾಣಿಜ್ಯ ತೆರಿಗೆ ಸಂಕೀರ್ಣ,
ನವನಗರ, ಹುಬ್ಬಳ್ಳಿ-580025,
ಮಿಂಚಂಚೆ: jcctenf.hbl@ctd.ka.gov.in
ದಿನಾಂಕ:08-06-2023

ಇವರಿಗೆ,
ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಇ-ಆಡಳಿತ),
ವಾಣಿಜ್ಯ ತೆರಿಗೆ ಕಾರ್ಯಾಲಯ-1,
ಗಾಂಧಿನಗರ,
ಬೆಂಗಳೂರು,

ಮಾನ್ಯರೇ,

<u>ವಿಷಯ</u>: ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017, ಕಲಂ-130 ರ ಅಡಿಯಲ್ಲಿ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿರುವ 30100 ಕೆ.ಜಿ "ಅಡಿಕೆ" ಸರಕನ್ನು ಹರಾಜು ಮೂಲಕ ವಿಲೇವಾರಿ ಮಾಡುವ ಸಂಬಂಧ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಕುರಿತು,

A.C.C.N 3

********

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017, ಕಲಂ-130 ರ ಅಡಿಯಲ್ಲಿ ವಾಹನ ಸಂಖ್ಯೆ: KA70/5071 ರಲ್ಲಿ ಇ-ವೇ ಬಿಲ್ಲ್ ಇಲ್ಲದೆ ಸಾಗಿಸುತ್ತಿದ್ದ 30100 ಕೆ.ಜಿ. ಅಡಿಕೆಯನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ-1), ಹುಬ್ಬಳ್ಳಿ ಇವರ ಆದೇಶ ದಿನಾಂಕ: 09-01-2023 ರ ಅನ್ವಯ ಮುಟ್ಟುಗೋಲು ಹಾಕಿಕೊಂಡಿರುತ್ತಾರೆ. ಈ ಹಿನ್ನಲೆಯಲ್ಲಿ ಪತ್ರದೊಂದಿಗೆ ಅಡಕಗೊಳಿಸಿರುವ ಸಾರ್ವಜನಿಕ ಹರಾಜು ಪ್ರಕಟಣೆಯನ್ನು ಇಲಾಖೆಯ ಜಾಲತಾಣದಲ್ಲಿ <u>http://ctax.kar.nic.in/public auction.asp</u> ಪ್ರಕಟಗೊಳಿಸಲು ತಮ್ಮಲ್ಲಿ ವಿನಂತಿಸಲಾಗಿದೆ.

ತಮ್ಮ ವಿಶ್ವಾಸಿ,
B. Nag. R
08/06/2023
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾರಿ), ನವನಗರ, ಹುಬ್ಬಳ್ಳಿ.
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾರಿ) ನವನಗರ, ಹುಬ್ಬಳ್ಳಿ.

Released on 14/06/23 at 5-15 PM

ಕರ್ನಾಟಕ ಸರ್ಕಾರ

# (ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ರವರ ಕಚೇರಿ,
2ನೇ ಮಹಡಿ, ವಾಣಿಜ್ಯ ತೆರಿಗೆ ಸಂಕೀರ್ಣ, ನವನಗರ, ಹುಬ್ಬಳ್ಳಿ-580025.
ಮಿಂಚಂಚೆ: acctenf-1.hbl@ctd.ka.gov.in ದೂರವಾಣಿ ಸಂ.0836-2212135.

ಸಂಖ್ಯೆ:ವಾತೆಸಆ(ಜಾರಿ-1)/ಹು/ಅಡಿಕೆ ಹರಾಜು/2023-24 ದಿನಾಂಕ:08-06-2023

## ಅಡಿಕೆ ಹರಾಜು ಪ್ರಕಟಣೆ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ-1), ಹುಬ್ಬಳ್ಳಿ ಇವರು ದಿನಾಂಕ: 09-01-2023 ರಂದು 30100 ಕೆ.ಜಿ ಅಡಿಕೆಯನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017, ಕಲಂ-130 ರಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ, ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು **"ಹೇಗೆ ಇದೆಯೋ ಹಾಗೆಯೇ"** ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿವುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ ಲಕೋಟೆಯನ್ನು **ದಿನಾಂಕ: 16-06-2023ರಂದು ಪೂರ್ವಾಹ್ನ 11:30 ಕ್ಕೆ** ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ-1), ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಹುಬ್ಬಳ್ಳಿ ರವರ ಕಚೇರಿ 2ನೇ ಮಹಡಿ, ವಾಣಿಜ್ಯ ತೆರಿಗೆ ಸಂಕೀರ್ಣ, ನವನಗರ, ಹುಬ್ಬಳ್ಳಿ-580025 ಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿವುಳ್ಳ, ಖರೀದಿದಾರರು ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

**ಷರತ್ತುಗಳು: 1.** ಮುಟ್ಟುಗೋಲು ಹಾಕಿಕೊಂಡಿರುವ ಅಡಿಕೆಯನ್ನು ಹುಬ್ಬಳ್ಳಿಯ ನವನಗರ, ವಾಣಿಜ್ಯ ತೆರಿಗೆ ಸಂಕೀರ್ಣದ ಆವರಣದ ಭೌತಿಕ ತಪಾಸಣೆಯ ಕಟ್ಟಡದಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು **ದಿನಾಂಕ:12-06-2023 ರಿಂದ 15-06-2023 ರವರೆಗೆ ಬೆಳಿಗ್ಗೆ 10:00 ಗಂಟೆಯಿಂದ ಸಾಯಂಕಾಲ 5:00 ಗಂಟೆವರೆಗೆ** ಕಛೇರಿಯ ವೇಳೆಯಲ್ಲಿ ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. **2.** ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಖರೀದಿಗಾರರು **ರೂ.1,00,000/- (ಒಂದು ಲಕ್ಷ ರೂಪಾಯಿಗಳು ಮಾತ್ರ)** ಮೌಲ್ಯದ ಮೊತ್ತವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಹುಬ್ಬಳ್ಳಿ ಇವರ ಹೆಸರಲ್ಲಿ ಡಿ.ಡಿ ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. **3.** ತದನಂತರ ಆಸಕ್ತಿವುಳ್ಳ ಖರೀದಿದಾರರು (ಕಡ್ಡಾಯವಾಗಿ ಜಿ.ಎಸ್.ಟಿ ಕಾಯ್ದೆ ಅಡಿ ನೋಂದಾಯಿತ ರಾಗಿರಬೇಕು) ಸೀಲು ಮಾಡಿದ ಬಿಡ್ ಲಕೋಟಿ ಜೊತೆಗೆ ಡಿ.ಡಿ.ಯನ್ನು ನೋಂದಣಿ ಅಂಚೆ ಅಥವಾ ವೈಯಕ್ತಿವಾಗಿ **ದಿನಾಂಕ:16-06-2023 ರ ಮುಂಜಾನೆ 10:00 ಗಂಟೆಯ** ಒಳಗಾಗಿ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. **4.** ಕಾರಣಾಂತರಗಳಿಂದ ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ-1), ಹುಬ್ಬಳ್ಳಿ ಇವರು ಹೊಂದಿರುತ್ತಾರೆ. **5.** ಯಶಸ್ವಿಯಾದ ಬಿಡ್‌ದಾರರು ಬಿಡ್ ಹಣವನ್ನು ಏಳು ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅ-ನೊಂದಾಯಿತ ಖರೀದಿ ಎಂದು ಪರಿಗಣಿಸಬೇಕು. **6.** ನಿಗಧಿತ 07 ದಿನಗಳೊಳಗಾಗಿ ಪೂರ್ತಿ ಬಿಡ್ ಹಣವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ 'ಇಎಂಡಿ' ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **7.** ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು **"ಹೇಗೆ ಇದೆಯೋ ಹಾಗೆಯೇ"** ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು. **8.** ಹೆಚ್ಚಿನ ಮಾಹಿತಿ, ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಸಹಿ/-

**ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು
(ಜಾರಿ-1), ನವನಗರ, ಹುಬ್ಬಳ್ಳಿ.**

ಪ್ರಜಾವಾಣಿ ದಿ. 08.06.2023